# ಪ್ರವಾದಿ ಕಾವ್ಯಪ್ರೇಮ

ಬಹಳ ಹಿಂದಿನಿಂದಲೂ ಮೆಕ್ಕಾ ಪಟ್ಟಣ ಧಾರ್ಮಿಕ ಕ್ಷೇತ್ರವಾಗಿ ಹೆಸರು ಪಡೆದಿದೆ. ಇಸ್ಲಾಂ ಧರ್ಮ ಹೊಸದಾಗಿ ತಲೆಯೆತ್ತುವುದಕ್ಕಿಂತಲೂ ಹಿಂದೆಯೇ ಅಲ್ಲಿನ ಮೂಲನಿವಾಸಿಗಳಾದ ಖುರೈಶಿಗಳು ಖಾಬಾ ಮಂದಿರದ ಮೇಲಿನ ಅಧಿಪತ್ಯದೊಂದಿಗೆ ಆಳ್ವಿಕೆ ನಡೆಸುತ್ತಿದ್ದರು. ಪ್ರವಾದಿ ಮೊಹಮದ್ ಅವರು ಮೊದಲು ಮದೀನಾದಲ್ಲಿ ಇಸ್ಲಾಂ ಧರ್ಮ ಹಾಗೂ ಆಡಳಿತವನ್ನು ಆರಂಭಿಸಿದರು. ಒಂದು ವರ್ಷದ ನಂತರ ಅವರು ಮೆಕ್ಕಾದಲ್ಲಿ ತಮ್ಮ ನೂತನ ಇಸ್ಲಾಂ ಧರ್ಮವನ್ನು ಅಲ್ಲಿನ ಮೂಲ ನೆಲದ ಧಾರ್ಮಿಕ ಸಂಸ್ಕೃತಿ, ಅದರ ಕಟ್ಟಲೆಗಳೊಂದಿಗೆ ರೂಪಿಸಿದರು. ಅವರ ಭಾವನೆಗಳಿಗೆ ಧಕ್ಕೆ ತರದಂತೆ ತಮ್ಮ ಧರ್ಮವನ್ನು ಆಚರಣೆಗೆ ತಂದದ್ದರಿಂದ ಅರೇಬಿಯಾದಲ್ಲಿ ಇಸ್ಲಾಂ ಧರ್ಮ ಬಲವಾಗಿ ನೆಲೆಯೂರಿತು.

ಇಸ್ಲಾಂ ಧರ್ಮ ಹಾಗೂ ದೇವರಾದ ಅಲ್ಲಾಹುವಿನ ಪ್ರತಿನಿಧಿ ತಾನೆಂಬ ಮೊಹಮದ್ ಅವರ ಮಾತುಗಳನ್ನು ಖುರೈಶಿಗಳು, ಯಹೂದಿಗಳು, ಕ್ರಿಶ್ಚಿಯನ್ನರು, ಅಲ್ಲಿನ ಇತರೆ ಬುಡಕಟ್ಟು ಜನಾಂಗದವರು ನಿಧಾನವಾಗಿ ಒಪ್ಪಿಕೊಂಡರು. ಪ್ರವಾದಿ ಮೊಹಮದ್ ಅವರು ಮೆಕ್ಕಾದ ಅಧಿಕಾರ ಪಡೆದುಕೊಂಡ ನಂತರ, ಇಸ್ಲಾಂ ಧರ್ಮದವರು ತಮ್ಮ ಒಟ್ಟು ಆದಾಯದ ಒಂದಷ್ಟು ಭಾಗವನ್ನು ಕಡ್ಡಾಯ ದಾನದ (ಜಕಾತ್) ರೂಪದಲ್ಲಿ ಕೊಡಬೇಕು ಎಂಬ ವ್ಯವಸ್ಥೆ ಜಾರಿಗೆ ತಂದರು. ಕೆಲವರು ಈ ದಾನವನ್ನು ಕೊಡಲು ಒಪ್ಪಿಕೊಂಡರೆ, ಕೆಲಪಂಗಡದವರು ವಿರೋಧಿಸಿದರು. ಆ ರೀತಿ ವಿರೋಧಿಸಿದ ಬೆನಿ ತಮೀಮ್ ಬುಡಕಟ್ಟಿನವರು, ಅಧಿಕಾರಿಗಳನ್ನು ಅಲ್ಲಿಂದ ಓಡಿಸಿದರು. ಅಧಿಕಾರಿಗಳ ವಿರುದ್ಧ ಗಲಭೆ ಮಾಡಿದ ಕೆಲವರನ್ನು ಬಂಧಿಸಲಾಯಿತು. ಒರಟು ಸ್ವಭಾವದ ಅವರು, ಮೊಹಮದ್ ಅವರ ಮನೆಯ ಮುಂದೆ ನಿಂತು, 'ಓ ಮೊಹಮದ್, ಹೊರಗೆ ಬಾ, ನಮ್ಮ ಬಳಿಗೆ ಬಾ' ಎಂದು ನ್ಯಾಯಕ್ಕಾಗಿ ಆಗ್ರಹಿಸಿದರು. ಪ್ರಾರ್ಥನಾವಿಧಿಗಳನ್ನು ಪೂರೈಸಿದ ನಂತರ ಹೊರಬಂದ ಪ್ರವಾದಿಯವರು, ಬೆನಿ ತಮೀಮರ ದೂರನ್ನು ಆಲಿಸಿದರು. ಬಂಧನಕ್ಕೊಳಗಾದ ತಮ್ಮವರನ್ನು ಬಿಡಿಸಿಕೊಳ್ಳಲು ಮದೀನಾ ನಗರದ ಯಾವುದೇ ಭಾಷಣಕಾರರ, ಕವಿಗಳ ಮುಂದೆ ಅವರಿಗೆ ಕಡಿಮೆಯಿಲ್ಲದಂತೆ ತಮ್ಮ ವಾಕ್ ಹಾಗೂ ಕವಿತಾ ಸಾಮರ್ಥ್ಯವನ್ನು ತೋರಿಸುತ್ತೇವೆ ಎಂಬ ಆ ಬುಡಕಟ್ಟಿನವರು ಸವಾಲೆಸೆದರು. ಆ ಹೊಸ ರೀತಿಯ ಕಾವ್ಯದ ಸವಾಲು ಪ್ರವಾದಿ ಅವರಿಗೆ ಅಚ್ಚರಿ ಹುಟ್ಟಿಸಿ, ಅದಕ್ಕೆ ಸಮ್ಮತಿ ನೀಡಿದರು. ಆ ಸಭೆಯಲ್ಲಿ ಬೆನಿ ತಮೀಮ್ ಪಂಗಡದವರು ಹಾಗೂ ಮದೀನಾದ ಕವಿಗಳು, ಭಾಷಣಕಾರರು ತಂತಮ್ಮ ಪ್ರತಿಭೆ ಪ್ರದರ್ಶಿಸಿದರು. ಬೆನಿ ತಮೀಮ್‌ನ ಹಸ್ಸನ್ ಎಂಬುವನ ಕವಿತ್ವ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಆತನ ಕಾವ್ಯವನ್ನು ಮೆಚ್ಚಿಕೊಂಡ ಮೊಹಮದ್ ಅವರು, ಸೆರೆಯಾಳುಗಳನ್ನು ಬಿಡುಗಡೆ ಮಾಡಿದ್ದಲ್ಲದೆ, ಉದಾರವಾದ ಉಡುಗೊರೆಗಳನ್ನು ಕೊಟ್ಟು ಕಳುಹಿಸಿದರು.

ಪ್ರವಾದಿ ಮೊಹಮದ್ ಅವರು ಬೆನಿ ತಮೀಮ್ ಪಂಗಡದವರನ್ನು ಕ್ಷಮಿಸಿದ್ದರೂ ಅವರ ಒರಟುತನವನ್ನು ಮರೆತಿರಲಿಲ್ಲ. ಖುರಾನಿನ ಒಂದು ಸುರಾದಲ್ಲಿ ತಮ್ಮನ್ನು ಭೇಟಿ ಮಾಡಲು ಬರುವವರು ತಮ್ಮೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಈ ಘಟನೆಯ ನಂತರ ಬರೆಯುತ್ತಾರೆ.

ಕಾವ್ಯಕ್ಕೆ ಸಂಬಂಧಿಸಿದ ಇನ್ನೊಂದು ಘಟನೆ, ಮೆಕ್ಕಾದ ಆ ಕಾಲದ ಕವಿ ಕಾಬ್‌ನನ್ನು ಕುರಿತಂತೆ ನಡೆಯುತ್ತದೆ. ಕವಿ ಕಾಬ್‌ನ ಸಹೋದರ ಇಸ್ಲಾಂ ಸ್ವೀಕರಿಸಿದ್ದ. ಇದನ್ನು ಸಹಿಸದ ಕವಿ ತನ್ನ ಕಾವ್ಯದ ಮೂಲಕ ಅನುಮಾನ, ಅಸಮಾಧಾನಗಳನ್ನು ವ್ಯಕ್ತಪಡಿಸುತ್ತಾನೆ. ತಾನು ಮಾಡಿದ್ದು ತಪ್ಪೆಂದು ಅರಿತ ನಂತರ, ಮದೀನಾದಲ್ಲಿದ್ದ ಮೊಹಮದರ ಬಳಿ ಕ್ಷಮೆ ಯಾಚಿಸಲು ಧಾವಿಸುತ್ತಾನೆ.

ಮಸೀದಿಯಲ್ಲಿ ಅವರನ್ನು ಕಂಡು, 'ಕವಿ ಕಾಬ್ ನಿಮ್ಮನ್ನು ಕಂಡು ನಿಮ್ಮ ಕ್ಷಮೆ ಹಾಗೂ ವಿಶ್ವಾಸ ಪಡೆಯಬೇಕೆಂದಿದ್ದಾನೆ. ನೀವು ಅವಕಾಶ ಕೊಡುವಿರೇನು' ಎಂದು ಕೇಳುತ್ತಾನೆ. ಪ್ರವಾದಿಯವರು ಅಸ್ತು ಎಂದಾಗ, ತಾನೇ ಅವನು ಎಂದು ಹೇಳಿ ಅಲ್ಲಿಯೇ ಕೃತಜ್ಞತಾ ಪೂರ್ವಕವಾದ ಕವಿತೆಯೊಂದನ್ನು ರಚಿಸುತ್ತಾನೆ. ಅದೇ ಪ್ರಸಿದ್ಧವಾದ 'ಪೊಯಮ್ ಆಫ್ ದಿ ಮ್ಯಾಂಟ್ಲ್' ಎಂದು ಇತಿಹಾಸಕಾರರು ಗುರುತಿಸುತ್ತಾರೆ. 'ಮೇಲುಹೊದಿಕೆಯ ಕವಿತೆ' ಎಂಬ ಆ ರಚನೆಯಲ್ಲಿ – 'ಹೌದು, ಪ್ರವಾದಿ ದೇವರ ಆಯುಧಶಾಲೆಯಲ್ಲಿನ ಒಂದು ಬಿಚ್ಚುಗತ್ತಿ, ವಿಶ್ವಕ್ಕೆ ಬೆಳಕನ್ನು ನೀಡುವ ದೀಪ' ಎಂಬ ಸಾಲುಗಳನ್ನು ಬರೆಯುತ್ತಾನೆ. ಕವಿ ಖಾಬ್ ಬರೆದ ಆ ಕವಿತೆಯನ್ನು ಮೆಚ್ಚಿಕೊಂಡು ಪ್ರವಾದಿ ಮೊಹಮದ್ ಅವರು ಸಂತೋಷಿಸುತ್ತಾರೆ. ತಾವು ಧರಿಸಿದ ಮೇಲಂಗಿಯನ್ನು ಕವಿಗೆ ಉಡುಗೊರೆಯಾಗಿ ನೀಡಿ ಆನಂದ ವ್ಯಕ್ತಪಡಿಸುತ್ತಾರೆ.

ಪ್ರವಾದಿಯವರು ನೀಡಿದ ಮೇಲಂಗಿಯ ಉಡುಗೊರೆಯಿಂದಲೇ ಆ ಕವಿತೆ 'ಮೇಲಂಗಿಯ ಕವಿತೆ' ಎಂಬ ಹೆಸರು ಪಡೆಯಿತು. ಆ ಮೇಲಂಗಿ ಕ್ರಮೇಣ ಕೈಯಿಂದ ಕೈಗೆ ದಾಟುತ್ತಾ ಕವಿಯ ಸಂತತಿಯ ಖಲೀಫನೊಬ್ಬನಿಗೆ ದೊರೆಯುತ್ತದೆ. ಅದರ ಒಂದು ತುಂಡು ಈಗಲೂ ಇಸ್ತಾಂಬುಲ್‌ನಲ್ಲಿ ಇದೆ ಎಂಬ ಪ್ರತೀತಿಯಿದೆ. ಶರಣರಂತೆ ವಿಗ್ರಹ ಆರಾಧನೆಯನ್ನು ತಿರಸ್ಕರಿಸಿದ, 'ಅಲ್ಲಾ ಒಬ್ಬನೇ ದೈವ' ಎಂದು ಸಾರಿದ ಮೊಹಮದ್ ಅವರ ಕಾವ್ಯಪ್ರೇಮವನ್ನು ಕುರಿತು ಅವರ ಜೀವನ ಚರಿತ್ರೆ ಬರೆದವರು ಉಲ್ಲೇಖಿಸುತ್ತಾರೆ. ಆಗುಂಬೆ ಎಸ್. ನಟರಾಜ್ ಬರೆದ 'ಮೊಹಮದ್ ಪೈಗಂಬರ್ ಮತ್ತು ಖಲೀಫರು' ಕೃತಿಯಲ್ಲಿ ಸಾಮಾನ್ಯರು ತಿಳಿಯದ ಇಂತಹ ಹಲವಾರು ಸಂಗತಿಗಳ ಉಲ್ಲೇಖಗಳಿವೆ.

■ **ಅಮೃತಮತಿ**

## ಮಾತೇ ಮುತ್ತು

- ಏಸು ಕಾಸು ಕೂಡಿದರೇನು
  ಏಸು ಕಾಲ ಬಾಳಿದರೇನು
  ಗಾಸಿ ತಪ್ಪದು ಈ ಜೀವಕ್ಕೆ
  —ಲೋಕೋಕ್ತಿ

- ಜೀವಂತವಾದ ಯಾವ ಭಾಷೆಯೂ ತಾನು ಕಡಿಮೆ ಯೋಗ್ಯತೆಯ ಭಾಷೆಯೆಂದು ಕುಗ್ಗಬಾರದು.
  —ಮಾಸ್ತಿ ವೆಂಕಟೇಶ ಅಯ್ಯಂಗಾರ್

- ಇತಿಹಾಸವೆಂದರೆ ಸತ್ತವರ ಮೇಲೆ ಕಟ್ಟುವ ಗೋರಿಯಲ್ಲ. ಅದೊಂದು ಆಳವಾದ ತತ್ವಜ್ಞಾನ.
  —ಆಲೂರು ವೆಂಕಟರಾಯರು

- ನಾಳೆ ಎಂಬುವುದು ನಿನ್ನಿನ ಮನಸು, ಮುಂದೆ ಎಂಬುವುದು ಇಂದಿನ ಕನಸು.
  —ದ.ರಾ. ಬೇಂದ್ರೆ

- ಬರವೇ ಇರಲಿ, ಸಮೃದ್ಧಿ ಬರಲಿ – ತಾಳುವ ಬಾಳಿನ ಬಾವುಟವಿರಲಿ.
  —ಕೆ.ಎಸ್. ನರಸಿಂಹ ಸ್ವಾಮಿ

- ಮುಚ್ಚುಮರೆ ಇಲ್ಲದೆಯೇ ನಿನ್ನಮುಂದೆಲ್ಲವನು ಬಿಚ್ಚಿಡುವೇ ಓ ಗುರುವೇ ಅಂತರಾತ್ಮ.
  —ಕುವೆಂಪು

- ವಿಧೇಯನಾಗಿ ಇರಲು ಕಲಿಯದವನು ಉತ್ತಮ ನಾಯಕ ಆಗಲು ಸಾಧ್ಯವಿಲ್ಲ.
  —ಅರಿಸ್ಟಾಟಲ್

- ಎಲ್ಲರ ಆಸೆಗಳನ್ನೂ ಪೂರೈಸುವ ತಾಕತ್ತು ನಮ್ಮ ನಿಸರ್ಗಕ್ಕಿದೆ, ಎಲ್ಲರ ದುರಾಸೆಗಳನ್ನಲ್ಲ.
  —ಮಹಾತ್ಮ ಗಾಂಧೀಜಿ

- ಧೈರ್ಯ ಎನ್ನುವುದು ನಿಮ್ಮೊಳಗಿದ್ದರೆ ಅದೇ ನಿಮ್ಮ ವ್ಯಕ್ತಿತ್ವದ ದೊಡ್ಡ ಆಸ್ತಿ.
  —ಬಾಲಗಂಗಾಧರ ತಿಲಕ್

- ಓದಿ ಮರುಳಾಗಬಾರದು; ಓದದೆಯೂ ಮರುಳಾಗಬಾರದು; ಓದಿ ಹುರುಳಾಗಬೇಕು.
  —ವಿ.ಕೃ. ಗೋಕಾಕ್